ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ

**E-mail ID: icpssarakar@gmail.com** **Ph.No.080-22879382**

ಸಂಖ್ಯೆ: ಐಸಿಪಿಎಸ್/ದತ್ತು-67/2015-16 ದಿನಾಂಕ: 04-04-2018

**ಸುತ್ತೋಲೆ**

ವಿಷಯ: ದತ್ತು ಪ್ರಕ್ರಿಯೆಗೆ ಸಂಬಂಧಪಟ್ಟಂತೆ ವಕೀಲರ ವೆಚ್ಚವನ್ನು ಭರಿಸುವ ಕುರಿತು

ಉಲ್ಲೇಖ: ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ, ನವದೆಹಲಿ ಹೊರಡಿಸಿದ ಸುತ್ತೋಲೆ ಸಂಖ್ಯೆ: IPO3/20/2016/CARA dated 5th April 2017

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದತ್ತು ಪ್ರಕಿಯೆಗೆ ಸಂಬಂಧಿಸಿದಂತೆ, ಭರಿಸಬಹುದಾದ ವೆಚ್ಚದ ಕುರಿತು ಉಲ್ಲೇಖ 2ರಲ್ಲಿ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ ಅಧಿಸೂಚನೆ ಹೊರಡಿಸಿದ್ದು, ವಿವರಣೆ ಈ ಕೆಳಕಂಡತಿದೆ.

ದತ್ತು ಅಧಿಸೂಚನೆ 2017 ಜಾರಿಗೆ ಬಂದ ನಂತರ Child Care Corpus (CCC) Fundನ್ನು Adoption Fee ಎಂದು ಕರೆಯಲಾಗುತ್ತಿದ್ದು, ಸ್ವದೇಶಿ ದತ್ತು ಪ್ರಕಿಯೆಗೆ ರೂ. 40,000/-ಗಳು ಹಾಗು ವಿದೇಶಿ ದತ್ತು ಪ್ರಕಿಯೆಗೆ 5,000 ಗಳನ್ನು ಎರಡು ಕಂತುಗಳಲ್ಲಿ ಪಡೆಯಲು ಅವಕಾಶ ನೀಡಿದೆ. ಈ **ಮೊತ್ತದಲ್ಲಿ ಸ್ವದೇಶಿ ದತ್ತುಗೆ ಸಂಬಂಧಿಸಿದಂತೆ ವಕೀಲರ ವೆಚ್ಚವನ್ನು ಶೇ. 20ಕ್ಕಿಂತ ಹಾಗು ವಿದೇಶಿ ದತ್ತುಗೆ ಸಂಬಂಧಿಸಿದಂತೆ ಶೇ.5.ಕ್ಕಿಂತ ಹೆಚ್ಚಿಗೆ ನೀಡಬಾರದೆಂದು ಸ್ಪಷ್ಟಪಡಿಸಿರುವುದಲ್ಲದೇ, ಎರಡು ಕಂತುಗಳಲ್ಲಿ ಪಡೆಯಬೇಕಾದ ದತ್ತು ಫೀ ಹಾಗು ವಕೀಲರ ವೆಚ್ಚದ ಕುರಿತು ಈ ಕೆಳಕಂಂಡಂತೆ ವಿವರಣೆ ನೀಡಿರುತ್ತಾರೆ.**

| | ಪಡೆಯುವ ದತ್ತು ಫೀ | ಮೊದಲನೇ ಕಂತು (ಮಗುವನ್ನು ಹಸ್ತಾಂತರಿಸುವಾಗ) | ಎರಡನೇ ಕಂತು (ದತ್ತು ಆದೇಶವನ್ನು ನೀಡುವಾಗ) | ವಕೀಲರ ವೆಚ್ಚ (ಮೊದಲನೇ ಕಂತು) | ವಕೀಲರ ವೆಚ್ಚ (ಮೊದಲನೇ ಕಂತು) |
|---|---|---|---|---|---|
| ಸ್ವದೇಶಿ ದತ್ತು | ರೂ. 40,000/- | ರೂ, 24,000/- | ರೂ. 16,000/- | ರೂ. 4,800/- | ರೂ. 3,200/- |
| ವಿದೇಶಿ ದತ್ತು | 5,000$ | 3,000$ | 2,000$ | 150$ | 100$ |

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳನ್ನು ದತ್ತು ನೀಡಿದಾಗ ಸಂಬಂಧಿಸಿದ ಸಂಸ್ಥೆಗೆ ಶೇ. 50ರಷ್ಟು ದತ್ತು ಫೀಯನ್ನು ವಿಶೇಷ ದತ್ತು ಸಂಸ್ಥೆಗಳು ಪಾವತಿಸಬೇಕಿರುತ್ತದೆ

ಮೇಲ್ಕಂಡ ಮಾಹಿತಿಯನ್ನು ದತ್ತು ತೆಗೆದುಕೊಳ್ಳುವ ಎಲ್ಲಾ ಪೋಷಕರಿಗೆ ಕಡ್ಡಾಯವಾಗಿ ತಿಳಿಸುವುದು. ಹಾಗು ಯಾವುದೇ ಕಾರಣಕ್ಕೂ ದತ್ತು ಪೋಷಕರಿಂದ ವಕೀಲರ ವೆಚ್ಚವೆಂದು ಹೆಚ್ಚುವರಿಯಾಗಿ ಪಡೆಯುವಂತಿಲ್ಲ. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ವಿಶೇಷ ದತ್ತು ಕೇಂದ್ರಗಳು, ಮೇಲ್ಕಂಡಂತೆ ದತ್ತು ಫೀ ಪಡೆಯುತ್ತಿರುವ ಹಾಗು ವಕೀಲರ ವೆಚ್ಚವನ್ನು ಪಾವತಿಸುತ್ತಿರುವ ಕುರಿತು ಮೇಲ್ವಿಚಾರಣೆ ಮಾಡಿ ಖಾತರಿ ಪಡಿಸಿಕೊಳ್ಳಲು ಈ ಮೂಲಕ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಉಲ್ಲೇಖದ ಅಧಿಸೂಚನೆ ಲಗತ್ತಿಸಿದೆ.

ಸದಸ್ಯ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ
ರಕ್ಷಣಾ ಸೊಸೈಟಿ, ಬೆಂಗಳೂರು.

ಪ್ರತಿಯನ್ನು:-

1. ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಮಾಹಿತಿಗೆ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ಎಲ್ಲಾ ವಿಶೇಷ ದತ್ತು ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.